

ಅಧ್ಯಕ್ಷತೆ ವಹಿಸಲು ಒಪ್ಪಿದರು. ನಾನು ವಿಶ್ವವಿದ್ಯಾನಿಲಯದ ಇನ್ಸ್ಟಿಟ್ಯೂಟ್ ಹಾಲ್‌ನತ್ತ ಹೆಜ್ಜೆ ಹಾಕಿದೆ. ಬೇರೆಯವರು ಅದನ್ನು ಮುಂಗಡವಾಗಿ ಕಾದಿರಿಸಿಕೊಂಡಿದ್ದರಿಂದ ನಮಗೆ ಅದು ಸಿಗುವುದಿಲ್ಲವೆಂದರು. ನಾನು ಕಾದಿರಿಸಿಕೊಂಡವರನ್ನು ಕಂಡು, ಅವರ ಕಾರ್ಯವನ್ನು ಮತ್ತೊಂದು ದಿನಕ್ಕೆ ವರ್ಗಾಯಿಸುವಂತೆ ಹೇಗೋ ಒಪ್ಪಿಸಿದೆ.

ಟ್ಯಾಗೋರರು ಆಗಮಿಸಿದಾಗ ಸಭೆಯು ಶಾಂತವಾಗಿತ್ತು. ನಾವೆಲ್ಲರೂ ಆಸನಗಳಲ್ಲಿ ಕುಳಿತಿದ್ದೆವು. ಟ್ಯಾಗೋರರಿಗಾಗಿ ಒಂದು ಆರಾಮಕುರ್ಚಿಯನ್ನು ಇರಿಸಿದ್ದೆವು. ಒಂದು ಭಾವಚಿತ್ರವನ್ನೂ ತೆಗೆಯಲಾಯಿತು. ಈ ಭಾವಚಿತ್ರದಲ್ಲಿ ಟ್ಯಾಗೋರರೊಂದಿಗೆ ಬ್ರಿಟಿಷ್ ಸೈನ್ಯಾಧಿಕಾರಿಯೂ, ಆಧ್ಯಾತ್ಮಿಕ ಲೇಖಕರೂ ಆಗಿದ್ದ ಸರ್ ಫ್ರಾನ್ಸಿಸ್ ಮತ್ತು ಸ್ವಾತಂತ್ರ್ಯ ಹೋರಾಟಗಾರರು ಹಾಗೂ 'ಭಾರತದ ಕೋಗಿಲೆ' ಎಂದು ಖ್ಯಾತಿ ಪಡೆದಿದ್ದ ಶ್ರೀಮತಿ ಸರೋಜಿನಿ ನಾಯ್ಡು ಮೊದಲಾದ ಇತರ ಗಣ್ಯರನ್ನು ಕಾಣಬಹುದು (ಮೇಲಿನ ಚಿತ್ರ ನೋಡಿ).

ಸಕಲ ಭಾರತೀಯರ ಹೆಮ್ಮೆಯ ವರಪುತ್ರರಾದ ರವೀಂದ್ರನಾಥ ಟ್ಯಾಗೋರರೇ ಆ ಸಭೆಯ ಪ್ರಮುಖ ಆಕರ್ಷಣೆಯಾಗಿದ್ದರು. ಅವರು ಆರಾಮಕುರ್ಚಿಯಲ್ಲಿ ಕುಳಿತೇ ತಮ್ಮ ವಿದ್ವತ್ಪೂರ್ಣವಾದ ಪ್ರಬಂಧವನ್ನು ಓದಿದರು. ಸುಮಾರು ೧೫೦೦ ಜನರು ನಿಶ್ಶಬ್ದವಾಗಿ ಅವರ ಮಾತುಗಳನ್ನು ಆಲಿಸಿದರು. ಟ್ಯಾಗೋರರಿಗೆ ಇದರಿಂದ ಅತ್ಯಂತ ಸಂತೋಷವಾಯಿತು. ಅನಂತರ ನನಗೆ ಅವರು ಹೀಗೆ ಹೇಳಿದರು: "ಸ್ವಾಮೀಜಿ, ಇಷ್ಟು ಶಾಂತವಾದ ಸಭೆಯನ್ನು ನಾನು ನನ್ನ ಜೀವಮಾನದಲ್ಲಿಯೇ ಕಂಡಿಲ್ಲ. ಅದ್ಭುತ! ನೀವೊಬ್ಬ ದಕ್ಷ ವ್ಯವಸ್ಥಾಪಕರು."

ತಮ್ಮ ಪ್ರಬಂಧವನ್ನು ಓದಿದ ಮೇಲೂ ಮನೆಗೆ ಹೋಗದೆ, ಟ್ಯಾಗೋರರು ಸಭೆಯು ಸಮಾಪ್ತವಾಗುವ ತನಕವೂ ಕುಳಿತೇ ಇದ್ದರು. ಸ್ವಲ್ಪ ಬಳಲಿದ್ದಾರೋ ಏನೋ ಎಂದು ಕೇಳಿದಾಗಲೆಲ್ಲ ಅವರು, "ಸ್ವಾಮೀಜಿ, ನಾನು ಚೆನ್ನಾಗಿದ್ದೇನೆ. ಬಹಳವೇ ಆನಂದಿಸುತ್ತಿದ್ದೇನೆ" ಎನ್ನುತ್ತಿದ್ದರು. ಟ್ಯಾಗೋರರು ತಮ್ಮ ಪ್ರಬಂಧವನ್ನು ಓದಿದ ನಂತರ ಸಭೆಯು ಮತ್ತೂ ಮೂರು ಘಂಟೆಗಳ ಕಾಲ ಜರುಗಿತು. ರವೀಂದ್ರನಾಥರು ಕಡೆಯವರೆಗೂ ಕುಳಿತೇ ಇದ್ದರು. ಟ್ಯಾಗೋರರ ವಿದ್ವತ್‌ಪೂರ್ಣ ಭಾಷಣವನ್ನು ಕೇಳಿದ ಸರ್ ಫ್ರಾನ್ಸಿಸ್ ಅವರು ತಮ್ಮ ಧನ್ಯವಾದ ಸಮರ್ಪಣಾ ಭಾಷಣದಲ್ಲಿ ಅದನ್ನು ಬಹಳವಾಗಿ ಪ್ರಶಂಸಿಸಿದರು.

ಮಾರ್ಚ್ ೪ ರಂದು, ಅಂದರೆ, ಟ್ಯಾಗೋರರು ಅಧ್ಯಕ್ಷರಾಗಿದ್ದ ಸಮಾವೇಶದ ಮರುದಿನ ಅವರ ಆರೋಗ್ಯವನ್ನು ವಿಚಾರಿಸಲೆಂದು, ರಾಮಾನಂದ ಚಟರ್ಜಿ ಮತ್ತು ನಾನು ಅವರಲ್ಲಿಗೆ ಹೋಗಿದ್ದೆವು. ಆಗ ಅವರು, "ನಾನು ಚೆನ್ನಾಗಿದ್ದೇನೆ. ನಿಮಗೆ ಧನ್ಯವಾದಗಳು. ಅಂತಹ ಶಾಂತ ಸಭೆಯನ್ನು ಹಿಂದೆಂದೂ ನಾನು ಕಂಡವನಲ್ಲ. ನಾನು ಬಹಳವೇ ಆನಂದಿಸಿದೆ. ರಾಮಕೃಷ್ಣ ಮಿಷನ್‌ನ ಸಂಘಟನಾಶಕ್ತಿಯು ನನಗೆ ಆಶ್ಚರ್ಯವನ್ನುಂಟುಮಾಡಿದೆ. ನೀವು ಮಹತ್ತರವಾದುದನ್ನೇ ಸಾಧಿಸಿದ್ದೀರಿ" ಎಂದು ತುಂಬುಕಂಠದಿಂದ ಶ್ಲಾಘಿಸಿದರು. ಆದರೆ ಈ ಶತಮಾನೋತ್ಸವವು ನಮ್ಮ ಸಾಧನೆಯೇನೂ ಅಲ್ಲ. ಶ್ರೀರಾಮಕೃಷ್ಣರ ಅಪಾರ ಕೃಪೆಯಿಂದ ಮಾತ್ರವೇ ಅದು ಸಾಧ್ಯವಾಯಿತೆಂಬುದರಲ್ಲಿ ನನಗಾವ ಸಂದೇಹವೂ ಇಲ್ಲ.

(ಆಧಾರ: *'ಗ್ಲೋಬಲ್ ವೇದಾಂತ'* ಪತ್ರಿಕೆ)

# ನಿರಂತರ ಕರುಣೆಯ ಝರಿ–ಶ್ರೀಶಾರದಾಮಾತೆ

ಬಂಗಾಳಿ ಮೂಲ: ಸುರೇಶಚಂದ್ರ ಚೌಧುರಿ
ಕನ್ನಡ ಅನುವಾದ: ಸ್ವಾಮಿ ಶಾಂತಿನಾಥಾನಂದ



ಶ್ರೀಮಾತೆಯವರ ಅನುಪಮ ಸ್ಮೃತಿಯೊಂದರ ಅನುವಾದವನ್ನು ವಾರಾಣಸಿಯ ಶ್ರೀರಾಮಕೃಷ್ಣ ಅದ್ವೈತಾಶ್ರಮದಲ್ಲಿ ನಿವೃತ್ತಜೀವನ ನಡೆಸುತ್ತಿರುವ ಸ್ವಾಮೀಜಿಯವರು ಮಾಡಿಕೊಟ್ಟಿದ್ದಾರೆ.

**ನಾ**ವು ಪೂರ್ವ ಬಂಗಾಳದವರು (ಈಗಿನ ಬಾಂಗ್ಲಾದೇಶ). ನನ್ನ ಬಾಲ್ಯ ಗೋಪಾಲ್‌ಗಂಜಿನಲ್ಲೇ ಕಳೆಯಿತು. ಶಾಲೆಯಲ್ಲಿ ಓದುತ್ತಿದ್ದಾಗಲೇ ನಾನು 'ಅನುಶೀಲನ ಸಮಿತಿ'ಯ (ಕ್ರಾಂತಿಕಾರಿ ಸಂಸ್ಥೆ) ಸದಸ್ಯನಾದೆ ಮತ್ತು ಸ್ವದೇಶಿ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದೆ. ಸ್ವಲ್ಪ ಸಮಯದ ನಂತರ ನನ್ನನ್ನು ರಾಜದ್ರೋಹದ ಆರೋಪದ ಮೇಲೆ ಬಂಧಿಸಿ, ಸುಮಾರು ಒಂದೂವರೆ ವರ್ಷ ಜೈಲಿನಲ್ಲಿಟ್ಟರು. ಜೈಲಿನಲ್ಲಿರುವಾಗ ನನ್ನಂತೆಯೇ ಬಂಧಿಯಾಗಿದ್ದ ಒಬ್ಬ ಯುವ ಡಾಕ್ಟರ್‌ನ ಪರಿಚಯವಾಯಿತು. ಆತನೂ ಸಹ ಸ್ವದೇಶಿ ಆಂದೋಲನದಲ್ಲಿ ಪಾಲ್ಗೊಂಡಿದ್ದನು. ಆ ಮಿತ್ರನ ಬಾಯಿಯಿಂದ ಸದಾ ನಾನು ಶ್ರೀರಾಮಕೃಷ್ಣರ ಮತ್ತು ಸ್ವಾಮಿ ವಿವೇಕಾನಂದರ ವಿಷಯಗಳನ್ನು ಕೇಳುತ್ತಿದ್ದೆ. ಮೊದಲೇ ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ಮೇಲೆ ನನಗೆ ಅನುರಾಗ, ಶ್ರದ್ಧೆಯಿತ್ತು. ನನ್ನ ಹೊಸ ಮಿತ್ರನ ಸಹವಾಸದಿಂದಾಗಿ, ಅವರುಗಳ ಬಗ್ಗೆ ಈಗಾಗಲೇ ಇದ್ದ ಪ್ರೀತಿ–ಶ್ರದ್ಧೆಗಳು ಇನ್ನೂ ಅಧಿಕವಾಗಿ ಬೆಳೆದವು. ಆತನಿಂದಲೇ ನಾನು ಶ್ರೀರಾಮಕೃಷ್ಣರ ಸಹಧರ್ಮಿಣಿ ಶ್ರೀಮಾತೆ ಶಾರದಾದೇವಿಯವರು ಇನ್ನೂ ಬದುಕಿದ್ದಾರೆಂದೂ, ಆಗಾಗ ಅವರ ಕೊಲ್ಕತಾದ ಬಾಗ್‌ಬಜಾರಿನ ಮನೆ 'ಉದ್ಬೋಧನ'ಕ್ಕೆ ಬರುತ್ತಾರೆಂದೂ ಮೊದಲ ಬಾರಿಗೆ ಕೇಳಿದೆ. ಇದನ್ನು ಕೇಳಿದ ಮೇಲೆ, ನನ್ನ ಜೀವನದ ಏಕಮಾತ್ರ ಲಕ್ಷ್ಯ ಮಾತೆಯವರ ದರ್ಶನ ಯಾವಾಗ ಮತ್ತು ಹೇಗೆ ಮಾಡುತ್ತೇನೆ ಎಂಬುದೇ ಆಯಿತು. ಬಿಡುಗಡೆಯಾದರೆ ಮಾತೆಯವರ ದರ್ಶನಕ್ಕೆ ಹೋಗಲು ದಾರಿ ಖರ್ಚಿಗೆ ಆಗುತ್ತದೆಂದು ನನಗೆ ಜೈಲಿನಲ್ಲಿ ಸಿಗುತ್ತಿದ್ದ ಮಾಸಿಕ ಭತ್ಯವನ್ನು ಕೂಡಿಡುತ್ತಿದ್ದೆ.

೧೯೧೯ ನೆಯ ಮೇ ತಿಂಗಳ ಒಂದು ಮನೋಹರ ಪ್ರಾತಃಕಾಲದಲ್ಲಿ ನನ್ನನ್ನು ಖುಲ್‌ನಾ ಜಿಲ್ಲೆಯ ದೌಲತ್‌ಪುರದ ಜೈಲಿನಿಂದ ಬಿಡುಗಡೆ ಮಾಡಿದರು. ಜೈಲಿನಿಂದ ಬಿಡುಗಡೆ ಹೊಂದಿದ ಒಡನೆಯೇ, ನಾನು ಲಗುಬಗೆಯಿಂದ ಉಟ್ಟಬಟ್ಟೆಯಲ್ಲಿಯೇ ಮಾತೆಯವರ ದರ್ಶನಕ್ಕೆ ಹೊರಟೆ. ಆ ಸಮಯದಲ್ಲಿ ನನಗಿದ್ದ ಒಂದೇ ಗುರಿಯೆಂದರೆ, ಹೇಗಾದರೂ ಮಾಡಿ ಬಾಗ್‌ಬಜಾರ್‌ನಲ್ಲಿಯ ಮಾತೆಯವರ ಮನೆಯನ್ನು ತಲುಪುವುದು. ಕೊನೆಗೂ ನಾನು ಅಲ್ಲಿಗೆ ಹೋದೆ. ಆದರೆ, ಶ್ರೀಮಾತೆ ಅಂದು ಅಲ್ಲಿರಲಿಲ್ಲ. ಅವರು ಎಲ್ಲಿದ್ದಾರೆಂದು ಯಾರಲ್ಲಿಯೂ ಕೇಳದೆ, ನಾನು ಗೌರೀಮಾ ನಡೆಸುತ್ತಿದ್ದ, ಶ್ಯಾಮ್ ಬಜಾರಿನಲ್ಲಿನ 'ಶ್ರೀಶಾರದೇಶ್ವರಿ ಆಶ್ರಮ'ಕ್ಕೆ ಹೋದೆ. ಆಗ ನಾನಿನ್ನೂ ಚಿಕ್ಕ ಹುಡುಗ. ಮಾತೆಯವರ ಹೆಸರಿನಲ್ಲಿರುವ ಆಶ್ರಮದಲ್ಲಿ ಅವರು ನಿಶ್ಚಯವಾಗಿಯೂ ಸಿಗುತ್ತಾರೆಂದು ಯೋಚಿಸಿದ್ದೆ. ಮಾತೆಯವರು ಅಲ್ಲೂ ಇರಲಿಲ್ಲ. ಮಾತೆಯವರು ನಿಶ್ಚಯವಾಗಿಯೂ ಕಾಮಾರಪುಕುರದಲ್ಲಿರುತ್ತಾರೆ ಎಂದು ಯೋಚಿಸಿದೆ. ಆದ್ದರಿಂದ ನಾನು ಈಗ ಕಾಮಾರಪುಕುರಕ್ಕೆ ಹೊರಟೆ. ಜೈಲಿನಲ್ಲಿ ದೊರೆತ ಭತ್ಯ ಕೇವಲ ಕೆಲವೇ ರೂಪಾಯಿಗಳು. ಇದರಲ್ಲಿ ಸ್ವಲ್ಪ ಈಗಾಗಲೇ ಖರ್ಚಾಗಿಹೋಗಿದೆ. ಆ ದಿನಗಳಲ್ಲಿ ಕಾಮಾರಪುಕುರದ ಯಾತ್ರೆ ತುಂಬಾ ಕಠಿಣವಾಗಿತ್ತು. ಸ್ವಲ್ಪ ದೂರ ರೈಲಿನಲ್ಲಿ ಮತ್ತು ಬಹುದೂರ ಕಾಲ್ನಡಿಗೆಯಲ್ಲಿ ಹೋಗಬೇಕಾಗಿತ್ತು. ದಾರಿಯುದ್ದಕ್ಕೂ ನಡೆದುಕೊಂಡೇ ಹೋದೆ.

ಜ್ಯೇಷ್ಠ ಮಾಸದ ಪ್ರಖರವಾದ ಬಿಸಿಲಿನಲ್ಲೇ ನನ್ನ ಆರಾಧ್ಯ ದೈವೀಮೂರ್ತಿಯ ದರ್ಶನ ಮಾಡಲು ಕೊಲ್ಕತಾದಿಂದ ಕಾಲ್ನಡಿಗೆಯಲ್ಲೇ ನಡೆದು ಹೋಗುತ್ತಿದ್ದೆ. ಹಸಿವಾದರೆ ಎರಡು ಕಾಸಿನ ಪುರಿ–ಬತ್ತಾಸುಗಳನ್ನು ತಿಂದು, ದಾರಿಯ ಪಕ್ಕ ದಲ್ಲಿನ ಕೊಳಗಳ ನೀರು ಕುಡಿಯುತ್ತಿದ್ದೆ. ಪ್ರಖರ ಬಿಸಿಲಿನಿಂದ ಶರೀರ ಸುಟ್ಟು ಹೋಗುವಂತಿತ್ತು. ರಸ್ತೆಯ ಪಕ್ಕದಲ್ಲಿಯ ಕೆರೆ, ಕೊಳಗಳಲ್ಲಿ ಮುಳುಗಿ ಶರೀರವನ್ನು ತಣ್ಣಗೆ ಮಾಡಿಕೊಳ್ಳುತ್ತಿದ್ದೆ. ಒದ್ದೆ ಬಟ್ಟೆ ಶರೀರದ ಮೇಲೆ ಒಣಗಿಹೋಗುತ್ತಿತ್ತು. ಮೂರು ದಿನಗಳ ನಂತರ, ಮಧ್ಯಾಹ್ನ ಕಾಮಾರಪುಕುರವನ್ನು ತಲುಪಿದೆ. ವಿಚಾರಿಸಿ, ಹುಡುಕಿ, ಶ್ರೀರಾಮಕೃಷ್ಣರ ಮನೆಗೆ ಹೋಗಿ ಶಿವುದಾದಾರನ್ನು (ಶಿವರಾಮ್ ಚಟ್ಟೋಪಾಧ್ಯಾಯ, ಶ್ರೀರಾಮಕೃಷ್ಣರ ಅಣ್ಣ ರಾಮೇಶ್ವರ ಚಟ್ಟೋಪಾಧ್ಯಾಯರ ಮಗ) ಭೇಟಿ ಮಾಡಿದೆ. ಅವರು, "ಮಾತೆಯವರು ಇಲ್ಲಿಲ್ಲ. ಅವರು ಕೊಯಲ್‌ಪಾರಾದಲ್ಲಿದ್ದಾರೆ" ಎಂದು ಹೇಳಿದರು. ಹಲದಾರಪುಕುರದಲ್ಲಿ ಸ್ನಾನ ಮಾಡಿ, ಶಿವುದಾದಾ ಕೊಟ್ಟ ಸ್ವಲ್ಪ ಅನ್ನ–ದಾಲ್ ತಿಂದು, ನಾನು ಕೊಯಲ್‌ಪಾರಾಗೆ ಹೋಗಲು ಸಿದ್ಧನಾದೆ. ಹೋಗುವಾಗ ಶಿವುದಾದಾಗೆ ಪ್ರಣಾಮ ಮಾಡಿದೆ. ಅವರು, "ಠಾಕೂರರು (ಶ್ರೀರಾಮಕೃಷ್ಣ) ಸ್ವತಃ ನೆಟ್ಟ ಮಾವಿನ ಮರದ ಹಣ್ಣುಗಳನ್ನು ಶ್ರೀಮಾತೆಯವರಿಗೆ ಕೊಡು" ಎಂದು ಹೇಳಿ ಹಣ್ಣುಗಳ ಗಂಟನ್ನು ಕೊಟ್ಟರು.

ನಾನು ಕೊಯಲ್‌ಪಾರಾ ತಲುಪಿದಾಗ ಸಂಜೆಯಾಗಿತ್ತು. ನನ್ನ ಒಣಗಿದ ಮುಖ ಮತ್ತು ಕೊಳೆಯಾದ ಬಟ್ಟೆಯನ್ನು ಕಂಡು, ಕೆಲವರು ನನ್ನನ್ನು ಸಂದೇಹದಿಂದ ನೋಡಿದರು. ನಾನು ಈಗ ತಾನೇ ಬಿಡುಗಡೆಯಾದ ಖೈದಿಯೆಂದು ತಿಳಿದಾಗ ಅವರ ಮುಖದ ಮೇಲೆ ಭಯದ ಚಿಹ್ನೆ ಕಾಣಿಸಿತು. ಅವರು, "ಪೊಲೀಸರು ದಿನವೂ ಬಂದು ತನಿಖೆ ಮಾಡುತ್ತಾರೆ. ಹೊಸಬರನ್ನೇನಾದರೂ ನೋಡಿದರೆ, ಅನೇಕ ಪ್ರಶ್ನೆಗಳನ್ನು ಕೇಳುತ್ತಾರೆ. ಕೆಲವು ಸಲ ಹಿಡಿದುಕೊಂಡು ಠಾಣೆಗೆ ಕರೆದೊಯ್ಯುತ್ತಾರೆ. ಅವರು ನಿನ್ನನ್ನು ನೋಡಿದರೆ ಹಿಡಿದುಕೊಂಡು ಹೋಗಬಹುದು" ಎಂದು ಹೇಳುತ್ತಿರುವಾಗ, ಒಬ್ಬ ಚಿಕ್ಕ ಹುಡುಗ ಬಂದು, "ಕೊಲ್ಕತಾದಿಂದ ಈಗ ತಾನೇ ಬಂದ ಹುಡುಗನನ್ನು ಶ್ರೀಮಾತೆಯವರು ಕರೆದುಕೊಂಡು ಬರಲು ಹೇಳುತ್ತಿದ್ದಾರೆ" ಎಂದು ಹೇಳಿದನು. ಈ ಒಂದು ವಾಕ್ಯದಿಂದಲೇ ನನ್ನ ಮನಸ್ಸು ಪ್ರಾಣಗಳು ಕರುಣೆಯ ನಿರಂತರ ಝರಿಯಲ್ಲಿ ಸ್ನಾನ ಮಾಡಿದಂತಾದವು, ಮನಸ್ಸು ಪುಳಕಿತವಾಯಿತು. ಶ್ರೀಮಾತೆಯವರ ಚರಣಗಳಲ್ಲಿ ಅರ್ಘ್ಯವೋ ಎಂಬಂತೆ ಕಣ್ಣಿನಿಂದ ಹನಿಗಳು ಉದುರಿದವು.

ಮನೆಯ ಒಳಗೆ ಹೋಗಿ ನೋಡಿದೆ. ಶ್ರೀಮಾತೆ ವರಾಂಡದಲ್ಲಿ ಕುಳಿತಿದ್ದಾರೆ. ಬಹು ಜನ್ಮಗಳ ಪರಿಚಯವೇನೋ ಅನ್ನುವಂತೆ ಮಧುರಸ್ವರದಲ್ಲಿ, "ಹೋಗಪ್ಪಾ ಮಗು, ಕೈಕಾಲು ತೊಳೆದುಕೋ, ನಂತರ ಸ್ವಲ್ಪ ಏನಾದರೂ ತಿನ್ನುವಿಯಂತೆ" ಎಂದು ಹೇಳಿದರು. ಶಿವುದಾದಾ ಕೊಟ್ಟ ಮಾವಿನ ಹಣ್ಣಿನ ಗಂಟನ್ನು ಶ್ರೀಮಾತೆಯವರ ಚರಣಗಳ ಸಮೀಪದಲ್ಲಿ ಇಡುತ್ತಾ ಹೇಳಿದೆ, "ಶಿವುದಾದಾ ನಿಮಗೋಸ್ಕರ ಮಾವಿನ ಹಣ್ಣುಗಳನ್ನು ಕಳಿಸಿದ್ದಾರೆ." ಶಿವುದಾದಾರ ಮನೆಯಲ್ಲಿ ಮಧ್ಯಾಹ್ನ ಊಟ ಮಾಡಿ ಬಂದಿದ್ದೇನೆಂದು ಹೇಳಿದೆ. ಅದಕ್ಕೆ ಅವರು, "ತಿಂದಿದ್ದರೇನಂತೆ, ಏನಾದರೂ ಸ್ವಲ್ಪ ತೆಗೆದುಕೋ" ಎಂದು ಹೇಳಿದರು. ಕೈಕಾಲು ಮುಖ ತೊಳೆದು ಬಂದ ನಂತರ, ಶ್ರೀಮಾತೆಯವರು ಅವರ ಪಕ್ಕದಲ್ಲೇ ಹಾಕಿದ್ದ ಆಸನದಲ್ಲಿ ಕುಳಿತುಕೊಳ್ಳಲು ಹೇಳಿದರು. ತಿನ್ನಲಿಕ್ಕೆ ಏನಾದರೂ ತರುವಂತೆ ಯಾರಿಗೋ ಹೇಳಿದರು. ಒಂದು ದೊಡ್ಡ ಬಟ್ಟಲು ತುಂಬ ಪುರಿ ಮತ್ತು ಚಿಕ್ಕ ಬಟ್ಟಲಿನಲ್ಲಿ ನಾಲ್ಕು ತೆಂಗಿನಕಾಯಿಯ ಲಡ್ಡುಗಳನ್ನು ನನಗೆ ತಿನ್ನುವುದಕ್ಕೆ ಕೊಟ್ಟರು. ಶ್ರೀಮಾತೆ ಹೇಳಿದರು, "ಶಿವೂನ ಮನೆಯಲ್ಲಿ ಊಟಮಾಡಿದೆಯಲ್ಲ, ಈಗ ಇದನ್ನೂ ತಿನ್ನು. ರಾತ್ರಿ ಚೆನ್ನಾಗಿ ಅಡುಗೆ ಮಾಡಿ ಬಡಿಸುತ್ತೇನೆ." ನಾನು ತಿಂದದ್ದು ಸಾಮಾನ್ಯ ತಿನಿಸು. ಆದರೆ ಅದರ ರುಚಿಯೋ ಅಸಾಧಾರಣ. ತಿಂದಾದ ನಂತರ ಶ್ರೀಮಾತೆ ಹೇಳಿದರು, "ಹೇಗಾದರೂ ಕಷ್ಟಪಟ್ಟು, ರಾತ್ರಿ ಇಲ್ಲೇ ಎಲ್ಲಾದರೂ ಸಮೀಪದಲ್ಲಿ ಉಳಿದುಕೋ. ಬೆಳಗ್ಗೆಯೇ ಸ್ನಾನ ಮಾಡಿ ಸಿದ್ಧನಾಗಿರು. ನಾನು ಹೇಳಿಕಳಿಸುತ್ತೇನೆ." ಶ್ರೀಮಾತೆಯವರು ಹೀಗೆ ಹೇಳಿದ ಮೇಲೆ, ಒಬ್ಬ ಹುಡುಗ 'ಕೋಲೆ' ಎಂಬ ಕುಟುಂಬಕ್ಕೆ ಸೇರಿದ ದುರ್ಗಾಮಂಟಪಕ್ಕೆ ರಾತ್ರಿಯ ವಿಶ್ರಾಂತಿಗಾಗಿ ನನ್ನನ್ನು ಕರೆದುಕೊಂಡು ಹೋದ. ಆ ಹುಡುಗನ ಹೆಸರು 'ವರದಾ' ಎಂದು. ಮುಂದೆ ಈಶಾನಾನಂದ ಎಂಬ ಹೆಸರು ಅವರಿಗೆ ಬಂತು.

ಮರುದಿನ ಬೆಳಗ್ಗೆ ಸ್ನಾನಾದಿಗಳನ್ನು ಮುಗಿಸಿ ನಾನು ತಯಾರಾಗಿದ್ದೆ. ಬೆಳಗಿನ ಆರು ಗಂಟೆಗೆ ವರದಾ ಬಂದು ಹೇಳಿದ, "ಮಾತೆಯವರು ಕರೆಯುತ್ತಿದ್ದಾರೆ." ಅರ್ಧ ದಾರಿಯಲ್ಲಿಯೇ ಮಾತೆಯವರ ದರ್ಶನವಾಯಿತು. ರಸ್ತೆಯಲ್ಲಿಯೇ ಅವರಿಗೆ ಪ್ರಣಾಮ ಮಾಡಿದೆ. ಒಣಹುಲ್ಲಿನ ಆಸನದಲ್ಲಿ ಕುಳಿತುಕೊಳ್ಳಲು ಸನ್ನೆ ಮಾಡಿದರು. ನಾನು ಕುಳಿತುಕೊಂಡೆ. ಶ್ರೀಮಾತೆಯವರು ಮತ್ತೊಂದು ಆಸನದಲ್ಲಿ ಕುಳಿತುಕೊಂಡರು. ಶ್ರೀಮಾತೆ ಹೇಳಿದರು, "ಮಗು, ಠಾಕೂರರಿಗೆ (ದೇವರಿಗೆ) ಮನಸ್ಸಿನಲ್ಲಿಯೇ ಪ್ರಣಾಮ ಮಾಡು." ಠಾಕೂರ್ ಅಂದರೆ ಶ್ರೀರಾಮಕೃಷ್ಣರನ್ನು ಕುರಿತೇ ಶ್ರೀಮಾತೆಯವರು ಹೇಳಿದರೆಂದು ನನಗೆ ಆಗ ತಿಳಿಯಲಿಲ್ಲ. ಈ ಕಾರಣದಿಂದಾಗಿ, ಯಾರಿಗೆ ಪ್ರಣಾಮ ಮಾಡಬೇಕೆಂದು ನನಗೆ ತಿಳಿಯಲಿಲ್ಲ. ಮಾತೆಯೇ ನನ್ನ ಠಾಕೂರ್ ಎಂದು ಭಾವಿಸಿ, ಶ್ರೀಮಾತೆಯವರಿಗೇ ಪ್ರಣಾಮ ಮಾಡಿದೆ. ನಾನು ಬಾಯಿ ಬಿಟ್ಟು ಏನನ್ನೂ ಹೇಳದಿದ್ದರೂ, ಮಾತೆಯವರ ಮುಖವು ಮಧುರ ಮಂದಹಾಸದಿಂದ ಪ್ರಫುಲ್ಲಿತವಾಗಿದ್ದನ್ನು ನೋಡಿದೆ. ಅನಂತರ ಮಾತೆಯವರು ಕೃಪೆಮಾಡಿ ನನಗೆ ಮಹಾಮಂತ್ರವನ್ನು ಪ್ರದಾನ ಮಾಡಿದರು. ಅನಂತರ ಕೈಬೆರಳುಗಳಲ್ಲಿ ಹೇಗೆ ಜಪ ಮಾಡಬೇಕೆಂದು ಹೇಳಿಕೊಟ್ಟರು. ತಮ್ಮ ಮುಂದೆಯೇ ಸ್ವಲ್ಪ ಕಾಲ ಜಪ ಮಾಡಲು ಕೂಡ ಹೇಳಿದರು. ಅನಂತರ ಹೀಗೆಂದರು, "ಮಗು, ಇಲ್ಲೇ ಕುಳಿತು ಸ್ವಲ್ಪ ಜಪ ಮಾಡು." ಇದಾದ ಮೇಲೆ ಮತ್ತೆ ಹೀಗೆ ಹೇಳಿದರು: "ಮಗು ನೀನು ಈಗಲೇ ಜಯರಾಂಬಾಟಿಗೆ ಹೊರಟುಹೋಗು. ಇಲ್ಲಿ ಪೊಲೀಸರ ಕಾಟ ಹೆಚ್ಚು. ಸಾಮಾನ್ಯವಾಗಿ ಅವರು ಇಲ್ಲಿ ಪ್ರತಿದಿನ ಬಂದು ವಿಚಾರಿಸಿ ಹೋಗುತ್ತಾರೆ. ಯಾರಾದರೂ ಹೊಸ ಹುಡುಗರು ಬಂದರೆ, ಅವರನ್ನು ತನಿಖೆ ಮಾಡುತ್ತಾರೆ. ಒಂದೊಂದು ಸಲ, ಠಾಣೆಗೆ ಕರೆದುಕೊಂಡು ಹೋಗುತ್ತಾರೆ. ನಿನ್ನನ್ನು ನೋಡಿದರೆ, ಅವರು ಹಿಡಿದು ಠಾಣೆಗೆ ಎಳೆದುಕೊಂಡು ಹೋಗಬಹುದು."

ಶ್ರೀಮಾತೆಗೆ ಪ್ರಣಾಮ ಮಾಡಿ ಆಶ್ರಮಕ್ಕೆ ಬಂದು ನೋಡಿದರೆ, ವರಾಂಡಾದಲ್ಲಿ ನನಗೆ ಈಗಾಗಲೇ ಒಂದು ಆಸನವನ್ನು ಹಾಕಿದ್ದರು! ಆಸನದಲ್ಲಿ ಕುಳಿತೆ. ಒಬ್ಬ ಮಹಿಳೆ ನನಗೆ ಊಟವನ್ನು ಬಡಿಸಿದರು. ನಾನು ತಿನ್ನಲು ಶುರುಮಾಡುವುದಕ್ಕೆ ಮುಂಚೆ, ಶ್ರೀಮಾತೆ ಬಂದರು. ಕಲ್ಲುಸಕ್ಕರೆಯ ಒಂದು ಚೂರು ನಾಲಗೆಗೆ ತಗಲಿಸಿ, ಪ್ರಸಾದ ಮಾಡಿ ನನಗೆ ಕೊಟ್ಟರು. ತಿನ್ನುತ್ತ ಇದ್ದಂತೆ, ಮಾತೆಯವರು ಹತ್ತಿರದಲ್ಲಿಯೇ ಕುಳಿತಿದ್ದರು. ತಿಂದನಂತರ ಮಾತೆಯವರಿಗೆ ಮತ್ತೊಮ್ಮೆ ಪ್ರಣಾಮ ಮಾಡಿ ಹೊರಟೆ. ಶ್ರೀಮಾತೆಯವರು ನನ್ನ ತಲೆಯ ಮೇಲೆ ಕೈಯನ್ನಿಟ್ಟು ಆಶೀರ್ವಾದ ಮಾಡಿದರು. ಗಲ್ಲವನ್ನು ಅಂಗೈಯಿಂದ